...

447 (444) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಸೇವಾ ಆಯೋಗದ ಪ್ರಾಂತೀಯ ಕಛೇರಿಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ ಹಾಗೂ ಯಾವಾಗಿನಿಂದ ಪ್ರಾರಂಭಿಸಲಾಗಿದೆ;

ಆ) ಅವುಗಳಿಗೆ ನಿಗದಿಪಡಿಸಲಾದ ಸಿಬ್ಬಂದಿ ವರ್ಗಗಳ ವಿವರಗಳೇನು;

ಇ) ಪ್ರಾಂತೀಯ ಕಛೇರಿಗಳಿಗೆ ನಿರ್ವಹಿಸಲಾದ ಕರ್ತವ್ಯಗಳೇನು ಹಾಗೂ ನೀಡಲಾದ ಅಧಿಕಾರಗಳೇನು; ಹಾಗೂ ಪ್ರಾಂತೀಯ ಕಛೇರಿಗಳಿಗೆ ತಗಲುತ್ತಿರುವ ನಿರ್ವಹಣಾ ವೆಚ್ಚವೆಷ್ಟು;

ಈ) ನಿರ್ವಹಣಾ ವೆಚ್ಚಕ್ಕೆ ಸರಿಯಾದ ಕಾರ್ಯ ಚಟುವಟಿಕೆ ಇಲ್ಲದ ಕಛೇರಿಗಳ ಅವಶ್ಯಕತೆ ಇಲ್ಲ ಎನ್ನುವುದನ್ನು ಸರ್ಕಾರ ಗಮನಿಸಿದೆಯೆ;

ಉ) ಗಮನಿಸಿದ್ದಲ್ಲಿ, ಆ ಕುರಿತಾದ ಸರ್ಕಾರದ ನಿಲುವೇನು;

ಊ) ರಾಜ್ಯ ಆಡಳಿತ ಸುಧಾರಣಾ ಆಯೋಗವು ಈ ಪ್ರಾಂತೀಯ ಕಛೇರಿಗಳನ್ನು ಮುಚ್ಚುವ ಬಗ್ಗೆ ಸಲಹೆ ನೀಡಿದೆಯೆ;

ಋ) ನೀಡಿದ್ದಲ್ಲಿ ನಿರೀಕ್ಷಿತ ಕಾರ್ಯ ಚಟುವಟಿಕೆಗಳಿಲ್ಲದ ಕಛೇರಿಗಳನ್ನು ಮುಚ್ಚಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು)

ಅ) ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ನಗರಗಳಲ್ಲಿ ನವೆಂಬರ್ 1994ರಿಂದ ಪ್ರಾರಂಭಿಸಲಾಗಿದೆ.

ಆ) ಪ್ರತಿಯೊಂದು ಪ್ರಾಂತೀಯ ಕಛೇರಿಗೆ ಕೆಳಕಂಡ ಸಿಬ್ಬಂದಿ ವರ್ಗವನ್ನು ನಿಗದಿಪಡಿಸಲಾಗಿದೆ:

1. ಸಹಾಯಕ ಕಾರ್ಯದರ್ಶಿ–ಎ ಗುಂಪು – 01
2. ಶಾಖಾಧಿಕಾರಿ – ಬಿ ಗುಂಪು – 01
3. ಸಹಾಯಕರು – ಸಿ ಗುಂಪು – 01
4. ಕಿರಿಯ ಸಹಾಯಕರು – ಸಿ ಗುಂಪು – 02
5. 'ಡಿ' ಗುಂಪಿನ ನೌಕರರು – 02

ಇ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳ ನೇಮಕಾತಿಗೆ ಹಾಗೂ ವಾರ್ಷಿಕ ಎರಡು ಅಧಿವೇಶನಗಳಲ್ಲಿ ಆಯೋಗವು ಸರ್ಕಾರದ ಸೇವೆಯಲ್ಲಿರುವವರಿಗೆ ನಡೆಸುವ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳಿಗನುಸಾರವಾಗಿ ಸಾರ್ವಜನಿಕರಿಗೆ, ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿಗಳನ್ನು ನೀಡುವ ಹಾಗೂ ಅರ್ಜಿಗಳನ್ನು ವಿತರಿಸುವ ಮತ್ತು ಸ್ವೀಕರಿಸುವ ಕಾರ್ಯವನ್ನು ಆಯಾ ವಿಭಾಗಗಳಲ್ಲಿನ ಪ್ರಾಂತೀಯ ಕಛೇರಿಗಳು ನಿರ್ವಹಿಸುತ್ತವೆ. ಅಲ್ಲದೆ, ರಾಜ್ಯದ ಎಲ್ಲಾ ವಿಭಾಗ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಇಲಾಖಾ ಪರೀಕ್ಷೆಗಳನ್ನು ಮತ್ತು ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಸಂದರ್ಶನಗಳನ್ನು ಏರ್ಪಡಿಸುವ

ಕಾರ್ಯವನ್ನೂ ಸಹ ಪ್ರಾಂತೀಯ ಕಛೇರಿಗಳು ನಿರ್ವಹಿಸುತ್ತಿವೆ. ಎಲ್ಲಾ ಪ್ರಾಂತೀಯ ಕಛೇರಿಗಳ ನಿರ್ವಹಣಾ ವೆಚ್ಚ ವಾರ್ಷಿಕ ರೂ. 23,32,855–00 ಆಗಿರುತ್ತದೆ.

ಈ) ಕರ್ನಾಟಕ ಲೋಕಸೇವಾ ಆಯೋಗದ ಪ್ರಾಂತೀಯ ಕಛೇರಿಗಳು ನಿರ್ವಹಣಾ ವೆಚ್ಚಕ್ಕೆ ಸರಿಯಾಗಿ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

ಉ) ಪ್ರಶ್ನೆ 'ಈ' ಗೆ ನೀಡಲಾದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಊ) ಇಲ್ಲ.

ಋ) ಪ್ರಶ್ನೆ 'ಊ' ಗೆ ನೀಡಲಾದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮುತು. ಕಾಸೂ. 106, 350 ಪುಸ್ತಕಗಳು, ದಿನಾಂಕ: 24-8-2005